


ವ್ಯಕ್ತಿಗಳ ಜೀವನದ ಸವಾಲುಗಳನ್ನು ಇನ್ನಷ್ಟು ಕ್ಲಿಷ್ಟವಾಗಿಸಿದೆ. ಈ ವ್ಯಕ್ತಿಗಳ ಮೇಲೆ ನಡೆಯುವ ಹಿಂಸೆಯನ್ನು ತಡೆಯುವ, ಹತ್ತಿಕ್ಕುವ ಕ್ರಮವನ್ನು ಈ ಕಾಯ್ದೆ ರೂಪಿಸಿಲ್ಲ.

ಒಬ್ಬ ವ್ಯಕ್ತಿ ತನ್ನ ಲಿಂಗವನ್ನು ತಾನೇ ನಿರ್ಧರಿಸುವುದು, ಹಾಗೆಂದು ಗುರುತಿಸಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಯ ಹಕ್ಕು ಎಂಬುದನ್ನು ನಾವಿನ್ನೂ ಪೂರ್ಣಪ್ರಮಾಣದಲ್ಲಿ ಕಾನೂನು ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿಲ್ಲ. ಹಾಗೆಯೇ ಸುಪ್ರೀಂ ಕೋರ್ಟ್, 'ಒಪ್ಪಿಗೆಯಿರುವ ಸಲಿಂಗಕಾಮ ಕಾನೂನು ಬಾಹಿರ ಅಲ್ಲ' ಎಂದು ಹೇಳಿದರೂ ಜನರ ಮನಸ್ಸಿನಲ್ಲಿ, ವ್ಯವಸ್ಥೆಯ ಕಾರ್ಯಗಳಲ್ಲಿ ಸಲಿಂಗಕಾಮದ ಬಗ್ಗೆ ಇರುವ ತಿರಸ್ಕಾರ ಇನ್ನೂ ಹೋಗಿಲ್ಲ.

ಸುಪ್ರೀಂ ಕೋರ್ಟ್‌ನ ತೀರ್ಪುಗಳನ್ನಾಗಲೀ, 2019ರ ಮೂರನೇ ಲಿಂಗದ ವ್ಯಕ್ತಿಗಳ ಹಕ್ಕುಗಳ ಬಗೆಗಿನ ಕಾನೂನನ್ನಾಗಲೀ – ಎಲ್ಲವನ್ನೂ ಈ ದಿಕ್ಕಿನಲ್ಲಿ ಹೊಸ ಪ್ರಾರಂಭ ಎಂದುಕೊಂಡು ಒಂದಷ್ಟು ಸಮಾಧಾನ ಪಟ್ಟುಕೊಳ್ಳಬಹುದು. ಆದರೆ ನಮ್ಮ ಕಾನೂನು ವ್ಯವಸ್ಥೆ, ಸಾಮಾಜಿಕ ಮನಃಸ್ಥಿತಿಯ ಮೂಲಕ ನಾವು ಸಾಧಿಸಬೇಕಾದದ್ದು ಇನ್ನೂ ಬಹಳಷ್ಟಿದೆ. ಕಾನೂನಿನ ಒಳಗೆ ಹೊರಗೆ, ಸಮಾಜದಲ್ಲಿ, ಮನೆಗಳಲ್ಲಿ, ಪ್ರತಿಯೊಬ್ಬರ ಮನಸ್ಸುಗಳು ಈ ವಿಷಯದಲ್ಲಿ ಒಪ್ಪಿಕೊಳ್ಳಬೇಕಾದ ಕೆಲವು ಸತ್ಯಗಳು ಮಹತ್ತರವಾದದ್ದು. ಸಹಜ, ಸಾಮಾನ್ಯ ಎಂಬುದಕ್ಕೆ ನಾವು ಕೊಡುವ ವ್ಯಾಖ್ಯಾನವನ್ನು ಈಗ ಹೃತ್ಪೂರ್ವಕವಾಗಿ ವಿಸ್ತರಿಸುವುದು ಬಹಳ ಮುಖ್ಯ.

ರೂಪ ಮಿತಿ, ಭೇದ ಮೀರಿ, ಯಾವುದೇ ಪೂರ್ವಗ್ರಹವಿಲ್ಲದೆ, ಲೇವಡಿ, ಅಪಹಾಸ್ಯ ಮಾಡದೇ ಅವರು ಇರುವಂತೆಯೇ ಒಪ್ಪಿಕೊಳ್ಳುವ ಸ್ಥಿತಿಗೆ ನಾವೆಲ್ಲ ತಲುಪಿದಾಗ, ಮಾನವ ಜನಾಂಗ ನಿಜವಾದ ವಿಕಾಸ ಹೊಂದಿದೆ ಎನ್ನಬಹುದು. ಅರ್ಧ ಎರಡಷ್ಟೇ ಅಲ್ಲ, ಮೂರನೆಯದೂ ಒಂದು ಅರ್ಧ ಇದೆ, ಇನ್ನೂ ಹಲವು ಇರಬಹುದು; ಅದೂ, ಈ ಎರಡು ಅರ್ಧಗಳಷ್ಟೇ ಪೂರ್ಣದ ಭಾಗವಾಗಿದೆ ಎಂಬುದು ಜಗತ್ತಿನ ಅತಿ ಸುಂದರ ಸತ್ಯಗಳಲ್ಲಿ ಒಂದು.

ಪ್ರತಿಕ್ರಿಯಿಸಿ: feedback@sudha.co.in

